ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ನಂ:ಜಂ.ಆ/ದಾವ/ಆ.ಮ/339/2013-14

ಜಂಟಿ ಆಯುಕ್ತರವರ ಕಛೇರಿ,
ದಾಸರಹಳ್ಳಿ ವಲಯ, ಬೆಂಗಳೂರು.
ದಿನಾಂಕ: 02/12/2013

ಆಡಳಿತಾತ್ಮಕ ಅನುಮೋದನೆ.

ಕಾಮಗಾರಿಯ ಹೆಸರು:- Pot holes Filling in ward no.13, Shettyhalli Sub Division.

ಅಂದಾಜು ಮೊತ್ತ : 5.00 ಲಕ್ಷಗಳು.

ಉಲ್ಲೇಖ ಸಂಖ್ಯೆ:-
1. ಮಾನ್ಯ ಆಯುಕ್ತರವರು ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಕಛೇರಿ ಆದೇಶ ಪತ್ರ ಸಂಖ್ಯೆ:ಮುಅಆ (ಜೆನರ್ಮ್)/ಕಾಸಂಕೋ/ಪಿಆರ್/513/2012-13, ದಿನಾಂಕ:14.08.2012.
2. ಮಾನ್ಯ ಆಯುಕ್ತರವರ ಸುತ್ತೋಲೆ ಪತ್ರ ಸಂಖ್ಯೆ:ಆಯುಕ್ತರು/ಪಿಆರ್/44/13-14, ದಿನಾಂಕ:11.06.2013

****

ಮೇಲಿನ ವಿಷಯದಲ್ಲಿ ತಿಳಿಸಿರುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ ರವರು 2013-14ನೇ ಸಾಲಿನ ದರ ಪಟ್ಟಿಯಂತೆ ಅಂದಾಜು ಪಟ್ಟಿ ತಯಾರಿಸಿ ಆಡಳಿತಾತ್ಮಕ ಅನುಮೋದನೆಯನ್ನು ಕೋರಿರುವ ಮೇರೆಗೆ ಉಲ್ಲೇಖ 1 ಮತ್ತು 2ರ ರೀತ್ಯಾ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 5.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಮತ್ತು ಆಡಳಿತಾತ್ಮಕ ಅನುಮೋದನೆಯ ಪುಸ್ತಕದ ಪುಟ ಸಂಖ್ಯೆ: 001 ಕ್ರಮ ಸಂಖ್ಯೆ:339 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೊದನೆ ಪಡೆಯುವುದು.
3. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4. ರಸ್ತೆ ಇತಿಹಾಸ ಪುಸ್ತಕದಲ್ಲಿ ಸದರಿ ಕಾಮಗಾರಿಯಲ್ಲಿನ ವಿವಿಧ ಕೆಲಸಗಳ ವಿವರಗಳನ್ನು ನಮೂದಿಸುವುದು.

ಜಂಟಿ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ದಾಸರಹಳ್ಳಿವಲಯ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:-

1) ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ ಬೆಂಗಳೂರು. ಮೂಲ ಅಂದಾಜು ಪಟ್ಟಿಯ ಕಡತದೊಂದಿಗೆ ಮುಂದಿನ ಕ್ರಮಕ್ಕಾಗಿ.
2) ಸಹಾಯಕ ಹಣಕಾಸು ನಿಯಂತ್ರಕರು, ದಾಸರಹಳ್ಳಿ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3) ಕಛೇರಿ ಪ್ರತಿ.